(ಕಛೇರಿ) 2224098, 2224195
2224301, 2222616
2224274, 2222505

# ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ - 580 025.

ಕ್ರ.ಸಂ. ಹು.ಧಾ.ನ.ಪ್ರಾ. : ಅ.ವಿ/ಗಾಮನಗಟ್ಟಿ/ಖಾ.ವಿ/2018-19/1116 ದಿನಾಂಕ : 7-06-2018

**ವಿಷಯ :** ಹುಬ್ಬಳ್ಳಿ ತಾ॥ ಗಾಮನಗಟ್ಟಿ ಗ್ರಾಮದ ರಿ.ಸ.ನಂ. 304,305,306,309/1,309/2,309/3,309/ಅ3,312/ಎ ರ ನೇದ್ದರ ಒಟ್ಟು ಕ್ಷೇತ್ರ 15ಎ-03ಗು ಪ್ರದೇಶದಲ್ಲಿ ವಸತಿ ಉದ್ದೇಶಕ್ಕಾಗಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರ ನೀಡುವ ಕುರಿತು.

**ಉಲ್ಲೇಖ :** ಈ ಕಚೇರಿ ಪತ್ರ ಸಂಖ್ಯೆ/ಅ.ವಿ/ಗಾಮನಗಟ್ಟಿ/ಸ.ಅ/2010-11/1615 ದಿ : 24-07-2010

**ಪೀಠಿಕೆ :**

ಹುಬ್ಬಳ್ಳಿ ತಾ॥ ಗಾಮನಗಟ್ಟಿ ಗ್ರಾಮದ ರಿ.ಸ.ನಂ. 304,305,306,309/1,309/2,309/3,309/ಅ3,312/ಎ ರ ನೇದ್ದರ ಒಟ್ಟು ಕ್ಷೇತ್ರ 15ಎ-03ಗು ಪ್ರದೇಶದಲ್ಲಿ ವಸತಿ ಉದ್ದೇಶದ ವಿನ್ಯಾಸವನ್ನು ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಮೆ॥ ಮಿಡ್‌ಮ್ಯಾಕ ಡೆವಲ್ಪರಸ್ ಪ್ರೈವೇಟ ಲಿಮಿಟೆಡ್, ಇದರ ತರ್ಫೆ ಶ್ರೀ ಶಮ್ಸ್ ತಬ್ರೇಜ ತಂದೆ ಕಾಶೀಮಸಾಬ ಸಮ್ಸಿ ಹಾಗೂ ಇತರರು ಹುಬ್ಬಳ್ಳಿ, ಇವರು ಪ್ರಾಧಿಕಾರದಿಂದ ತಿಳಿಸಲಾದ ಮೇಲ್ವಿಚಾರಣಾ ಶುಲ್ಕ ಸಂದಾಯ ಮಾಡಿ ಪರವಾನಿಗೆ ಪಡೆದುಕೊಂಡು ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಖಡೀ ರಸ್ತೆ ನಿರ್ಮಾಣ, ಡಾಂಬರೀಕರಣ, ಅಡ್ಡಗಾಲುವೆಗಳು, ಗಟಾರ ನಿರ್ಮಾಣ ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸಿರುವರು. ವಿದ್ಯುತ್ ಕಾಮಗಾರಿಗಳನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಧಾರವಾಡ ಇವರ ಮೇಲ್ವೀಚಾರಣೆಯಲ್ಲಿ ಪೂರ್ಣಗೊಳಿಸಿರುವರು. ದಿನಾಂಕ :28-06-2018 ರಂದು ಪ್ರಾಧಿಕಾರದ ಕಾರ್ಯನಿರ್ವಾಹಕ ಅಭಿಯಂತರರು, ವಸತಿ ವಿನ್ಯಾಸದಲ್ಲಿಯ ಅಭಿವೃದ್ಧಿ ಕಾಮಗಾರಿಗಳನ್ನು ಪರಿವೀಕ್ಷಿಸಿ, ವಸತಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಮಾಡಿರುವುದಾಗಿ ವರದಿ ಸಲ್ಲಿಸಿರುವರು.

## ಪ್ರಾಧಿಕಾರದ ಆದೇಶ

ಹುಬ್ಬಳ್ಳಿ ತಾ॥ ಗಾಮನಗಟ್ಟಿ ಗ್ರಾಮದ ರಿ.ಸ.ನಂ. 304,305,306,309/1,309/2,309/3,309/ಅ3,312/ಎ ರ ನೇದ್ದರ ಒಟ್ಟು ಕ್ಷೇತ್ರ 15ಎ-03ಗು ಪ್ರದೇಶದಲ್ಲಿ ವಸತಿ ಉದ್ದೇಶದ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಈ ಕೆಳಗೆ ತಿಳಿಸಿದ ಕರಾರುಗಳಿಗೆ ಒಳಪಟ್ಟು ಮುಕ್ತಾಯ ಪ್ರಮಾಣ ಪತ್ರ ನೀಡಲಾಗಿದೆ.

1. ಮಹಾನಗರ ಪಾಲಿಕೆಗೆ **ವಸತಿ ಉದ್ದೇಶದ** ವಿನ್ಯಾಸವನ್ನು ಹಸ್ತಾಂತರ ಆಗುವವರೆಗೆ ನಿವೇಶನದಾರರಿಗೆ ನೀರು ಸರಬರಾಜು ಮಾಡಲು ಕ್ರಮ ಕೈಕೊಳ್ಳಬೇಕು.
2. ಕಸದ ತೊಟ್ಟಿ ಅಳವಡಿಸುವ ಕುರಿತಾಗಿ ಮಹಾನಗರ ಪಾಲಿಕೆ ಸೂಚಿಸಿದಂತೆ ಕ್ರಮ ಕೈಕೊಳ್ಳುವುದು.
3. ನೀರು ಸರಬರಾಜು ಕಾಮಗಾರಿ ಕುರಿತು ಮುಖ್ಯ ಕೊಳವೆ ಲಭ್ಯವಾದಾಗ ಜೋಡಣೆ ಮಾಡಲು ಪಾಲಿಕೆಯ ಪರವಾನಗಿ ಪಡೆದು ವಿನ್ಯಾಸದಾರರು ತಮ್ಮ ಸ್ವಂತ ಖರ್ಚಿನಲ್ಲಿ ಜೋಡಣೆ ಮಾಡಿಕೊಡುವುದು.
4. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ಸೂಚಿಸುವ ಯಾವುದೇ ಕಾಮಗಾರಿಗಳಲ್ಲಿಯ ದೋಷಗಳನ್ನು ವಿನ್ಯಾಸದಾರರು ತಮ್ಮ ಸ್ವಂತ ಖರ್ಚಿನಿಂದ ಮಾಡಿಸುವುದು.
5. ನೀರು ಸರಬರಾಜು ಕಾಮಗಾರಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ನಿರ್ಧರಿಸುವ ಪ್ರೋರೇಟಾ ಮೊತ್ತವನ್ನು ವಿನ್ಯಾಸದಾರರು ತುಂಬುವುದು.
6. ಒಳಚರಂಡಿ ಕಾಮಗಾರಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ನಿರ್ಧರಿಸುವ ಮೊತ್ತವನ್ನು ವಿನ್ಯಾಸದಾರರು ತುಂಬುವುದು

..2..

7. ಮಹಾನಗರ ಪಾಲಿಕೆಯವರು ಸೂಚಿಸುವ ಇನ್ನಿತರ ಕಾಮಗಾರಿಗಳನ್ನು ವಿನ್ಯಾಸದಾರರು ಮಾಡುವುದು.
8. ಸದರಿ ವಸತಿ ಉದ್ದೇಶದ ವಿನ್ಯಾಸದಲ್ಲಿ ನಿವೇಶನದಾರರು ತಾವು ಕಟ್ಟಲಿರುವ ಕಟ್ಟಡಗಳಿಗೆ ಮಹಾನಗರ ಪಾಲಿಕೆಯಿಂದ ಪರವಾನಗಿ ಪಡೆಯತಕ್ಕದ್ದು.
9. ಪಾಲಿಕೆ ತಿಳಿಸುವ ಅವಧಿಯ ವರೆಗೆ ವಸತಿ ಉದ್ದೇಶದ ವಿನ್ಯಾಸದಲ್ಲಿ ಮೂಲಭೂತ ಸೌಕರ್ಯಗಳ ನಿರ್ವಹಣೆಯನ್ನು ವಿನ್ಯಾಸದಾರರು ಮಾಡುವುದು.

ಆಯುಕ್ತರು,
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,
ಹುಬ್ಬಳ್ಳಿ.

<u>ಸದರ ಪ್ರತಿಯನ್ನು ಆದರಪೂರ್ವಕವಾಗಿ :</u>

1. ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಇವರಿಗೆ ಮುಕ್ತಾಯ ಪ್ರಮಾಣ ಪತ್ರದ ದಾಖಲಾತಿಗಳೊಂದಿಗೆ 1) ಇಂಡೆಮ್ನಿನಟಿ ಬಾಂಡ, 2) ರಿಲ್ವೀಕಿಂಶ್ ಡೀಡ 3) ಮುಚ್ಚಳಿಕೆ ಪತ್ರ, 4) ಹೆಸ್ಕಾಂ ಇವರ ಪತ್ರ, 5) ನೀರು ಸರಬರಾಜು ಕೊಳವೆಗಳ ಬಿಲ್ಲು, 6) ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಿರುವ ನಕ್ಷೆಗಳು 5 ಪ್ರತಿಗಳಲ್ಲಿ ಇತ್ಯಾದಿಗಳನ್ನು ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ. ಪ್ರಾಧಿಕಾರದ ಅಧಿನಿಯಮ ಉಪಬಂಧ 30 ರನ್ವಯ ಸದರೀ **ವಸತಿ ಉದ್ದೇಶದ** ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.
2. ಮೆ॥ ಮಿಡ್‌ಮ್ಯಾಕ ಡೆವಲ್ಪರಸ್ ಪ್ರೈವೇಟ ಲಿಮಿಟೆಡ್, ಇದರ ತರ್ಫೆ ಶ್ರೀ ಶಮ್ಸ್ ತಬ್ರೇಜ ತಂದೆ ಕಾಶೀಮಸಾಬ ಸಮ್ಸಿ ಹಾಗೂ ಇತರರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಪ್ರಾಧಿಕಾರದ ಯೋಜನಾ ವಿಭಾಗಕ್ಕೆ.
4. ಹೆಚ್ಚಿನ ಪ್ರತಿ.